# ವಿದ್ಯಾರ್ಥಿಗಳೇ ಇವುಗಳ ಬಗ್ಗೆ ಎಚ್ಚರವಹಿಸ

* ಬಳಸುವ ಪೆನ್ನು, ಪೆನ್ಸಿಲ್ಲು, ರಬ್ಬರು, ಉತ್ತಮ ಮಟ್ಟದ್ದಾಗಿರಲಿ (ಒಂದಕ್ಕಿಂತ ಹೆಚ್ಚು ಒಂದೇ ರೀತಿಯ ಪೆನ್ನು ಪೆನ್ಸಿಲ್‌ಗಳನ್ನು ಇಟ್ಟುಕೊಳ್ಳಿ). ಈ ಎಲ್ಲವನ್ನು ಸರಿಯಾದ ಒಂದು ಪೆಟ್ಟಿಗೆಯಲ್ಲಿ ಇಟ್ಟುಕೊಳ್ಳಿ,

* ನಿಮಗಿಂತ ಧೈರ್ಯ ಕಳೆದುಕೊಂಡಿರುವ ವಿದ್ಯಾರ್ಥಿಗಳಿಂದ ದೂರವಿರಿ.

* ನಿಮ್ಮಲ್ಲಿ ನೀವೇ ಧೈರ್ಯ ತುಂಬಿಕೊಳ್ಳಿ, ನನ್ನಿಂದ 'ಇದು ಸಾಧ್ಯ' ಎಂದು ಮನಗಾಣಿ.

* ಪರೀಕ್ಷಾ ಕೊಠಡಿಗೆ ತೆರಳುವ ಮುನ್ನ ಹಾಗೂ ತೆರಳಿದ ನಂತರ ಆತ್ಮಸ್ಥೈರ್ಯವನ್ನು ಕಳೆದುಕೊಳ್ಳದಿರಿ.

* ನಿಮ್ಮ ಕ್ರಮ ಸಂಖ್ಯೆಯನ್ನು(ರಿಜಿಸ್ಟರ್ ನಂಬರ್) ಸರಿಯಾಗಿ, ಸರಿಯಾದ ಸ್ಥಳದಲ್ಲಿ ಬರೆಯಿರಿ.

* ಪ್ರಶ್ನೆ ಪತ್ರಿಕೆ ಕೈಗೆ ಸಿಕ್ಕೊಡನೇ ಉತ್ತರಿಸಬೇಡಿ.

* ಎಲ್ಲಾ ಪ್ರಶ್ನೆಗಳನ್ನೂ ಒಮ್ಮೆ ಸಂಪೂರ್ಣವಾಗಿ ಓದಿ.

* ಉತ್ತರಿಸಲು ಆತುರಪಡಬೇಡಿ.

* ಅಕ್ಷರಗಳು, ಚಿತ್ರಗಳು ಸಂದರವಾಗಿರುವಂತೆ, ಚಿತ್ತು ಮಾಡದೇ ಅಚ್ಚುಕಟ್ಟಾಗಿ ಬರೆಯಿರಿ.

* ಕಾಗುಣಿತ ಹಾಗೂ ಸ್ಪೆಲ್ಲಿಂಗ್‌ನ ಬಗ್ಗೆ ಅತಿ ಹೆಚ್ಚಿನ ಗಮನವಿರಲಿ.

* ಸಾಲುಗಳು ನೇರವಾಗಿ, ಸಮಾನಾಂತರವಾಗಿರುವಂತೆ ಬರೆಯಿರಿ.

* ವಾಕ್ಯಗಳು ಸಂಪೂರ್ಣವಾಗಿದ್ದು, ವ್ಯಾಕರಣಬದ್ಧವಾಗಿರಲಿ.

* ಯಾವ ಪ್ರಶ್ನೆಗೆ ನಿಖರವಾದ ಉತ್ತರಗೊತ್ತಿರುತ್ತದೆಯೋ ಅದೇ ಪ್ರಶ್ನೆಯನ್ನು ಮೊದಲು ಉತ್ತರಿಸಿ.

* ಯಾವುದಾದರೂ ಪ್ರಶ್ನೆಗೆ ಉತ್ತರ ಗೊತ್ತಾಗದಿದ್ದಲ್ಲಿ, ಸಮಯವನ್ನು ವ್ಯರ್ಥ ಮಾಡದೇ, ಆ ಪ್ರಶ್ನೆಯನ್ನು ಬಿಟ್ಟು ಮುಂದಿನ ಪ್ರಶ್ನೆಗೆ ಉತ್ತರಿಸಿ ಬಿಟ್ಟ ಪ್ರಶ್ನೆಯನ್ನು ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿದ ಮೇಲೆ ಉತ್ತರಿಸಿ ಅಥವಾ ಯಾವಾಗ ನಿಮಗೆ ಉತ್ತರ ನೆನಪು ಬರುವುದೋ ಆಗ ಉತ್ತರಿಸಿ.

* ಪ್ರಶ್ನೆಗಳಿಗೆ ಉತ್ತರಿಸುವಾಗ ಅಕ್ಕಪಕ್ಕದವರು ಉತ್ತರಿಸುವುದನ್ನು ನೋಡಬೇಡಿ.

* ಯಾವ ಪ್ರಶ್ನೆಯನ್ನೂ ಉತ್ತರಿಸದೇ ಬಿಟ್ಟು ಬರಬೇಡಿ. ಎಲ್ಲಾ ಪ್ರಶ್ನೆಗಳನ್ನೂ ಉತ್ತರಿಸಿ.

* ಪರೀಕ್ಷೆ ಮುಗಿಯುವುದಕ್ಕಿಂತ ಐದು ನಿಮಿಷ ಮುಂಚಿತವಾಗಿ ಎಲ್ಲಾ ಉತ್ತರಗಳನ್ನೂ ಬರೆಯುವ ಅಭ್ಯಾಸ ಬೆಳಸಿಕೊಳ್ಳಿ

* ನೀವು ಬರೆದಿರುವ ಉತ್ತರಗಳನ್ನು ಪುನಃ ಪರಿಶೀಲಿಸಿ.

* ಉತ್ತರ ಪತ್ರಿಕೆಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ಬಲವಾಗಿ ಕಟ್ಟಿ

* ಒಂದು ಪತ್ರಿಕೆಯಲ್ಲಿ ಉತ್ತರಿಸಿದ ಮೇಲೆ ಆದರ ಚಿಂತೆಯನ್ನು ಬಿಟ್ಟು ಮುಂದಿನದನ್ನು ಅಭ್ಯಾಸಮಾಡಿ.